ವಿಷಯ: ಭಾರೀ ಮಳೆಯಿಂದ ಬಿದ್ದಿರುವ ಮನೆಗಳಿಗೆ ಹಾಗೂ ಸಿಡಿಲು ಹೊಡೆತದಿಂದ ಸತ್ತಿರುವ ಕುರಿಗಳಿಗೆ ಸಂಬಂಧಿಸಿದಂತೆ ಪರಿಹಾರ ನೀಡುವ ಬಗ್ಗೆ

ಶ್ರೀ ಎಸ್.ಎಲ್.ಧರ್ಮೇಗೌಡ(ಬೀರೂರು): ಸನ್ಮಾನ್ಯ ಅಧ್ಯಕ್ಷರೆ, ಕಡೂರು ತಾಲೂಕು, ಬೀರೂರು ಹೋಬಳಿಯ ಎರೇಹಳ್ಳಿ ಗ್ರಾಮದಲ್ಲಿ ದಿನಾಂಕ 18-04-05ರಂದು ಒಂದೇ ಸಮನೆ ಮಳೆ ಬಿದ್ದುದರಿಂದ 77 ಮನೆಗಳಿಗೆ ನೀರು ನುಗ್ಗಿ ಸುಮಾರು 300 ಕ್ವಿಂಟಾಲ್ ರಾಗಿ ಹಾಳಾಗಿದೆ. ಮತ್ತು ಕುರುಬಗೆರೆ ಎನ್ನುವ ಗ್ರಾಮದಲ್ಲಿ ಸಿಡಿಲು ಹೊಡೆದು 38 ಕುರಿಗಳು ಸತ್ತು ಹೋಗಿವೆ. ಈ ಸಂಬಂಧವಾಗಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದ ನಂತರ ತಹಶೀಲ್ದಾರರು ಬಂದು ಸ್ಥಳಪರಿಶೀಲನೆ ಮಾಡಿದ್ದಾರೆ ಮತ್ತು ಅವರು ಸರ್ಕಾರಕ್ಕೂ ಸಹ ಸಮಸ್ಯೆಯನ್ನು ತಿಳಿಸಿದ್ದಾರೆ. ಆದರೆ ಸರ್ಕಾರದ ವತಿಯಿಂದ ಜಿಲ್ಲಾಧಿಕಾರಿಗಳು, ಕುರಿಗಳು ಸತ್ತುಹೋಗಿರುವುದಕ್ಕೆ ಯಾವುದೇ ಪರಿಹಾರವನ್ನು ಕೊಡಲು ಆಗುವುದಿಲ್ಲವೆಂದು ಪತ್ರ ಕೊಟ್ಟಿದ್ದಾರೆ. ಸತ್ತು ಹೋಗಿರತಕ್ಕಂಥ ಕುರಿಗಳನ್ನು ಸಾಕಾಣಿಕೆ ಮಾಡುತ್ತಿದ್ದಂಥ 7-8 ಕುಟುಂಬಗಳವರು ಕಡುಬಡವರಾಗಿದ್ದು, ಅದನ್ನೇ ನಂಬಿ ಜೀವನ ಮಾಡುತ್ತಿದ್ದಂಥವರು. ಒಂದೇ ರಾತ್ರಿಯಲ್ಲಿ 38 ಕುರಿಗಳು ಸತ್ತು ಹೋಗಿವೆ ಮತ್ತು 77 ಮನೆಗಳ ಗೋಡೆಗಳು ಬಿದ್ದಿದ್ದು, ಆ ಮನೆಗಳವರು ಸಂಪೂರ್ಣವಾಗಿ ಕಡುಬಡವರಾಗಿದ್ದಾರೆ. ಅದರ ಬಗ್ಗೆಯೂ ಸಹ ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ. ದಯಮಾಡಿ ಸರ್ಕಾರದವರು ಅವರಿಗೆ ಪರಿಹಾರ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ ಹಾಗೂ ಇದಕ್ಕೆ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಎನ್.ಸಿ.ಸಿಎಫ್ ಮೂಲಕ ಪ್ರವಾಹ ಪರಿಹಾರ ನದಿಯಿಂದ ಕಾನೂನಿನ ಪ್ರಕಾರವಾಗಿ ಜಾನುವಾರುಗಳು ತೀರಿ ಕೊಂಡರೆ ಪರಿಹಾರ ಕೊಡಲಿಕ್ಕೆ ಬರುತ್ತದೆ ಎನ್ನುವುದಾದರೆ ಕುರಿ ಸಾಕಾಣಿಕೆ ಮಾಡುತ್ತಿದ್ದಂಥವರು ಬಡವರಾಗಿರಲಿ ಅಥವಾ ಯಾರೇ ಆಗಿರಲಿ, ಕುರಿಗಳು ಸತ್ತಿರತಕ್ಕಂಥಾದ್ದಕ್ಕೆ ಕೊಡಬೇಕಾಗಿರುತಕ್ಕಂಥ ಪರಿಹಾರವನ್ನು ನಿಯಮಾವಳಿ ಪ್ರಕಾರ ಖಂಡಿತಾ ಅವರಿಗೆ ಕೊಡುತ್ತೇನೆ.

ಇನ್ನು ಮನೆಗಳು ಬಿದ್ದಿರತಕ್ಕಂಥ ವಿಚಾರದಲ್ಲಿ ತಹಶೀಲ್ದಾರರು ಅಲ್ಲಿಗೆ ಹೋಗಿ ಬಿದ್ದಿರತಕ್ಕಂಥ ಮನೆಗಳನ್ನು ದುರಸ್ತಿ ಮಾಡಲು ಆಗತಕ್ಕಂಥ ಖರ್ಚುವೆಚ್ಚದ ಬಗ್ಗೆ ಹಾಗೂ ಆದ ನಷ್ಟದ ಅಂದಾಜನ್ನು ಮಾಡಿ ಕಳುಹಿಸಿಕೊಡಬೇಕು ಅವರ ಮೂಲಕ ತ್ವರಿತವಾಗಿ ಕ್ರಮ ಕೈಗೊಳ್ಳಲು ಈ ದಿವಸವೇ ನಾನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ: ಯಾವುದೇ ಮನೆ ಬಿದ್ದರೂ ಕೂಡಾ 500 ರೂಪಾಯಿಗಳ ಪರಿಹಾರವನ್ನೂ ನೀಡಿಲ್ಲ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಉಪಪ್ರಶ್ನೆಗೆ ಅವಕಾಶವಿಲ್ಲ. ಇದು ಶೂನ್ಯವೇಳೆ.

ವಿಷಯ: ಬಿಸಿಯೂಟ ಯೋಜನೆಯಲ್ಲಿ ಊಟ ಮಾಡಿದ ಶಾಲಾ ಮಕ್ಕಳು ಅಸ್ವಸ್ಥರಾಗಿದ್ದು, ಅದಕ್ಕೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ

ಶ್ರೀ ಎಂ.ಪಿ. ರೇಣುಕಾಚಾರ್ಯ(ಹೊನ್ನಾಳಿ): ಮಾನ್ಯ ಸಭಾಧ್ಯಕ್ಷರೆ, ನಮ್ಮ ತಾಲೂಕಿನ ಬೇಲಿಮನ್ನೂರಿನಲ್ಲಿ ಕಳೆದ ತಿಂಗಳ 23ರಂದು 200 ಜನ ಮಕ್ಕಳು ಬಿಸಿಯೂಟ ಯೋಜನೆಯಲ್ಲಿ ಮಧ್ಯಾಹ್ನ ಊಟ ಮಾಡಿದ ನಂತರ ಅಸ್ವಸ್ಥರಾಗಿ ಎರಡು ದಿವಸ ಆಸ್ಪತ್ರೆಯಲ್ಲಿದ್ದರು. ಎಸ್.ಎಂ. ಕೃಷ್ಣಾರವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರ ಜಾರಿಗೆ ತಂದಂಥ ಬಿಸಿಯೂಟ ಯೋಜನೆಯನ್ನು ಜಾರಿಗೆ ತರುವ ಮೊದಲು ಸರ್ಕಾರ ಶಾಲೆಗಳಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಟ್ಟು ಜಾರಿಗೆ ತರಬೇಕಾಗಿತ್ತು. ಆದರೆ ಈಗ ಈ ವ್ಯವಸ್ಥೆ ಅವ್ಯವಸ್ಥೆಯಾಗಿದ್ದು, ನಮ್ಮ ತಾಲೂಕಿನಲ್ಲಿ ಸುಮಾರು ಹಳ್ಳಿಗಳಲ್ಲಿ ಈ ಬಿಸಿಯೂಟದ ವ್ಯವಸ್ಥೆಯನ್ನು ನಿಲ್ಲಿಸಬೇಕೆಂದು ಸಾರ್ವಜನಿಕರು ಒತ್ತಡ ತರುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ, ಊಟಕ್ಕೆ ಒಳ್ಳೆಯ ಅಕ್ಕಿಯನ್ನು ಸಪ್ಲೈ ಮಾಡುತ್ತಿಲ್ಲ. ಸಾಂಬಾರ್ ತಯಾರು ಮಾಡಲು ತರಕಾರಿ ಮತ್ತು ಬೇಳೆಗೆ ಕೇವಲ 20 ಪೈಸೆಯನ್ನು ಮಾತ್ರ ಕೊಡುತ್ತಿದ್ದಾರೆ. ಆದ್ದರಿಂದ ಈ ಒಂದು ಬಿಸಿಯೂಟದ ಯೋಜನೆಯ ಬದಲಾಗಿ ಬೇರೊಂದು ಪರ್ಯಾಯ ವ್ಯವಸ್ಥೆ ಮಾಡಬೇಕು. ಮತ್ತು ಶಾಲಾ ಮಕ್ಕಳು ಅಸ್ವಸ್ಥರಾಗಿದ್ದುದಕ್ಕೆ ಕಾರಣರ್ಯಾರು ಎನ್ನುವುದನ್ನು ಪತ್ತೆ ಹಚ್ಚಿ ಸರ್ಕಾರ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಬಿಸಿಯೂಟದ ಕಾರ್ಯಕ್ರಮದಲ್ಲಿ ಆಹಾರ ಕೆಟ್ಟು ಹೋಗಿ ವಿಷಪೂರಿತವಾಗಿರತಕ್ಕಂಥಾದ್ದು ನಿಜವಾಗಿಯೂ ಕೂಡಾ ವಿಷಾದ ಪಡಬೇಕಾದಂಥ ಸಂಗತಿಯಾಗಿದೆ. ಆದರೆ ಬಿಸಿಯೂಟದ ಈ ಕಾರ್ಯಕ್ರಮ ಬಡ ಮಕ್ಕಳಿಗೆ ಅನುಕೂಲವಾಗಿರುವಂತಹದ್ದು ಮಾನ್ಯ ಶಾಸಕರಿಂದ ಹಿಡಿದು ಪ್ರತಿಯೊಬ್ಬರಿಗೂ ಕೂಡಾ ಮನವರಿಕೆಯಾಗಿದೆ. ಇದೊಂದು ಅತ್ಯಂತ ಉತ್ತಮವಾದ ಕಾರ್ಯಕ್ರಮ ಮತ್ತು ಬಡ ಮಕ್ಕಳು ಶಾಲೆಗೆ ಬರಬೇಕು ಎನ್ನುವ ರೀತಿಯಲ್ಲಿ ಉತ್ತೇಜನ ನೀಡುವ ಹಾಗೂ ಪೌಷ್ಟಿಕ ಆಹಾರ ಕೊಡತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮ. ಸದಸ್ಯರು ಹೇಳಿರುವಂತೆ ಅವರ ಕ್ಷೇತ್ರದಲ್ಲಿ ನಡೆದಿರತಕ್ಕಂಥ ಘಟನೆಯ